



ಜನತಾವಾಣಿ - 26/01/2013

ವಿವೇಕಾ-ವಿಜ್ಞಾನ-ವಿನೋದ ಕಾರ್ಯಕ್ರಮ

# ಬಡವರಿಗೆ ವಿದ್ಯುತ್ ಇನ್ನೂ ಮರೀಚಿಕೆ

## ■ ವಿದ್ಯುತ್ ಕೊರತೆಯಿಂದ ಬಡವರ ಮಕ್ಕಳು ಶಿಕ್ಷಣದಿಂದ ವಂಚಿತ: ಹರೀಶ್

**ಚಿತ್ರದುರ್ಗ:** ವೈಜ್ಞಾನಿಕ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ದೇಶದಲ್ಲಿ ಇಂದಿಗೂ ಶೇ.50ರಷ್ಟು ಬಡವರಿಗೆ ವಿದ್ಯುತ್ ಪೂರೈಸಲಾಗುತ್ತಿಲ್ಲ ಎಂದು ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಸೆಲ್ಕೋ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಡಾ। ಎಚ್.ಹರೀಶ್ ಹಂದೆ ವಿಶ್ಲೇಷಿಸಿದರು.

ನಗರದ ತ.ರಾ.ಸು ರಂಗಮಂದಿರದಲ್ಲಿ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನದ ಪ್ರಯುಕ್ತ ಸೆಲ್ಕೋ ಸೋಲಾರ್ ಲೈಟ್ ಪ್ರೈ.ಲಿ., ಪ್ರಗತಿ ಗ್ರಾಮೀಣ ಬ್ಯಾಂಕ್, ಐಯುಡಿಪಿ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನಡೆದ ವಿವೇಕಾ-ವಿಜ್ಞಾನ-ವಿನೋದ ಕಾರ್ಯಕ್ರಮದಲ್ಲಿ 'ದಿನಬಳಕೆಯ ಸೌರವಿಜ್ಞಾನದ ಸವಾಲುಗಳು' ಕುರಿತು ಉಪನ್ಯಾಸ ನೀಡಿದರು.

ವಿದ್ಯುತ್ ಕೊರತೆಯಿಂದಾಗಿ ವಿದ್ಯಾಭ್ಯಾಸದಿಂದ ವಂಚಿತರಾಗುವ ಬಡವರ ಮಕ್ಕಳು ಶ್ರೀಮಂತರ ಮಕ್ಕಳೊಂದಿಗೆ ಸ್ಪರ್ಧಿಸಲಾಗದೇ ಅಭಿವೃದ್ಧಿ ಹಿನ್ನಡೆ ಕಾಣುತ್ತಿದ್ದಾರೆ. ಭಾರತದ ಇಂದಿನ ಸ್ಥಿತಿಗತಿಯೂ ಸರ್ಕಾರಗಳು ಬಿಡುಗಡೆ ಮಾಡುವ ಅಭಿವೃದ್ಧಿಯ ಅಂಕಿಅಂಶಗಳಿಗಿಂತ ಭಿನ್ನವಾಗಿದೆ. ಅಲ್ಲದೆ ಬಡವ ಅತಿ ಬಡವನಾಗುತ್ತಿದ್ದಾನೆ. ಶ್ರೀಮಂತ ಅತಿ ಶ್ರೀಮಂತನಾಗುತ್ತಿದ್ದಾನೆ. ಇಂಧನ ಕೊರತೆಯ ಕಾರಣದಿಂದಾಗಿಯೇ ನಮ್ಮ ದೇಶದ ಬಡವ ದುಬಾರಿ ವೆಚ್ಚ ಭರಿಸಿ ಇಂಧನ ಖರೀದಿಸುತ್ತಿದ್ದಾನೆ ಎಂದರು.



ಚಿತ್ರದುರ್ಗ: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪ್ರೊ। ರಾಘವೇಂದ್ರ ಪಾಟೀಲ್ ಮಾತನಾಡಿದರು.

ಪ್ರತಿ ರಾತ್ರಿಯ 4 ಗಂಟೆಯ ಬೆಳಕಿಗಾಗಿ 15 ರೂ.ಗಳಂತೆ ಪ್ರತಿ ತಿಂಗಳು 450 ರೂ. ವೆಚ್ಚ ಭರಿಸುತ್ತಿದ್ದಾನೆ. ಯಾವ ಶ್ರೀಮಂತನು ಸಹ ತಾನು ಬಳಸುವ 4 ಗಂಟೆಯ ವಿದ್ಯುತ್‌ಗೆ 450 ರೂ. ಪಾವತಿಸುತ್ತಿಲ್ಲ. ಇದು ಬಡವರ ಶೋಷಣೆಯಲ್ಲದೇ ಮತ್ತೇನೂ ಅಲ್ಲ ಎಂದರು.

ಬೇರೆ ಗ್ರಹಗಳಿಗೆ ಉಪಗ್ರಹಗಳ ಉಡಾವಣೆ, ದೊಡ್ಡ ದೊಡ್ಡ ಕಟ್ಟಡಗಳ ನಿರ್ಮಾಣದಿಂದ ಬಲಿಷ್ಠ ಭಾರತ ಕಟ್ಟಲು ಸಾಧ್ಯವಿಲ್ಲ. ಪ್ರತಿನಿತ್ಯ ಲಭ್ಯವಿರುವ ಸೌರಶಕ್ತಿ ಬಳಸಿ ಇಂಧನ ಕ್ಷೇತ್ರದಲ್ಲಿ ಪ್ರತಿಯೊಬ್ಬರು ಸ್ವಾವಲಂಬಿಗಳನ್ನಾಗಬೇಕು. ಆಗ ಬಲಿಷ್ಠ ಭಾರತದ ನಿರ್ಮಾಣ ಸಾಧ್ಯವಾಗಬಲ್ಲದು. ನಮ್ಮ ಸರ್ಕಾರ ರೂಪಿಸುವ ಯೋಜನೆಗಳು ಬಡವರ ಸಮಸ್ಯೆಗಳನ್ನು ಕೇಂದ್ರವನ್ನಾಗಿಸಿಕೊಂಡಾಗ ಮಾತ್ರ ಭಾರತದ ಬಡವರ ಸ್ಥಿತಿಗತಿ ಉತ್ತಮವಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪ್ರೊ। ರಾಘವೇಂದ್ರ ಪಾಟೀಲ್ ಮಾತನಾಡಿ, ವಿವೇಕಾನಂದರ ಚಿಂತನೆಗಳ ಅಗತ್ಯತೆ ಮತ್ತು ಪ್ರಸ್ತುತ ಸಂದರ್ಭದಲ್ಲಿ ಅವರ ತತ್ವಗಳ ಅಳವಡಿಕೆ ಕುರಿತು ಚಿಂತನೆ ಮಂಡಿಸಿದರು.

ವಿದುಷಿ ಶ್ವೇತಾ ಮಂಜುನಾಥ ಮತ್ತು ತಂಡದಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನ ನೀಡಿದರು. ಈ ಕಾರ್ಯಕ್ರಮದಲ್ಲಿ ಸೆಲ್ಕೋ ಸಂಸ್ಥೆಯ ಎ.ಜಿ.ಎಂ.ಮೋಹನ್ ಹೆಗಡೆ, ಡಾನ್ ಬಾಸ್ಕೋದ ಫಾದರ್ ಜೂಲಿಯನ್, ಮೈರಾಡ ಸಂಸ್ಥೆ ವಿಜಯ್‌ಕುಮಾರ್, ಪ್ರಗತಿ ಗ್ರಾಮೀಣಾ ಬ್ಯಾಂಕ್ ವ್ಯವಸ್ಥಾಪಕ ಮಂಜುನಾಥಸ್ವಾಮಿ, ಸೆಲ್ಕೋ ಸಂಸ್ಥೆಯ ಮಂಜುನಾಥ್ ಭಾಗವತ್ ಉಪಸ್ಥಿತರಿದ್ದರು. ಎಂ.ರಮೇಶ್ ಕಾರ್ಯಕ್ರಮ ನಿರೂಪಿಸಿದರು.

# ಭರಮಸಾಗರದಲ್ಲಿ ಈದ್ ಮಿಲಾದ್ ಸಂಭ್ರಮ

**ಭರಮಸಾಗರ:** ಪ್ರವಾದಿ ಮಹಮದ್ ಪೈಗಂಬರ್ ಜನ್ಮದಿನದ ಸಲುವಾಗಿ ಈದ್-ಮಿಲಾದನ್ನು ಪಟ್ಟಣದ ಮುಸ್ಲಿಂ ಬಾಂಧವರು ಶುಕ್ರವಾರ ಸಂಭ್ರಮದಿಂದ ಆಚರಿಸಿದರು.

ಅಪರಾಧ ಸುದ್ದಿಗಳು